ರಘುನಾಥಗಿರಿಗೋಸಾಯಿ, 3ನೇ ಶ್ರೀರಾಂಜಂದ್ರಬ್ಯಾಂಕ್, 4ನೇ ಟರ್ಫ ಬ್ಯಾಂಕ್, 5ನೇ ನಾರಣಯ್ಯಂಗಾರ್, 6ನೇ ಜಗರ್ಮೋಹನ ಬ್ಯಾಂಕ್, 7ನೇ ಇನ್‌ಪ್ಯೂರ್ ಬ್ಯಾಂಕ್, 8ನೇ ಲಕ್ಷ್ಮೀನರಸಿಹ್ಮ ಬ್ಯಾಂಕ್, 9ನೇ ರಾಜರಾಜೇಶ್ವರಿ ಬ್ಯಾಂಕ್, 10ನೇ ಚಿಕ್ಕಮುದ್ದಪ್ಪ, 11ನೇ ರಾಮಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ನಂಜಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿನೋಜನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತರವಾಗಿವಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1895ನೇ ಇಸವಿ ಏಪ್ರೆಲ್ 10ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ ‘ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೀದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಲಗು.	ಡ್ಯೂಸಾಗಿ ದೇಣಿ ಇರುವದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಸೂ.
1ನೇ	ಬೆಳತೂರು ಕೇತಮ್ಮ	320-0-0	..	ಡಿಕ್ರಿ ಬಾಬತು	
2ನೇ	ರಘುನಾಥಗಿರಿಗೋಸಾಯಿ	200-0-0	..	ಡಿಟೋ	
3ನೇ	ಶಾಮಾಚಾರಿ ಬ್ಯಾಂಕ್	65-0-0	..	ಡಿಟೋ	
4ನೇ	ಮೈಸೂರ್ ಟರ್ಫ ಬ್ಯಾಂಕ್	60-0-0	..	ಡಿಟೋ	
5ನೇ	ನಾರಣಯ್ಯಂಗಾರ್	35-0-0	..	ಡಿಟೋ	
6ನೇ	ಜಗರ್ಮೋಹನ ಬ್ಯಾಂಕ್	75-0-0	..	ಡಿಟೋ	
7ನೇ	ಐಯ್ನಯ್ಯಂಗಾರ್	50-0-0	..	ಡಿಟೋ	
8ನೇ	ಲಕ್ಷ್ಮೀನರಸಿಹ್ಮ ಬ್ಯಾಂಕ್	21-0-0	..	ಡಿಟೋ	
9ನೇ	ರಾಜರಾಜೇಶ್ವರಿ ಬ್ಯಾಂಕ್	30-0-0	..	ಡಿಟೋ	
		838-0-0	..		

ಯಂ. ರಾಮಸ್ವಾಮಯ್ಯರ್,
ಸಬ್ ಜಡ್ಜ್.

1895ನೇ ಇಸವಿ ಮಾರ್ಚಿ ತಾರೀಖು 26ನೇ ಮಧ್ಯಾನ್ಹ 1 ಘಂಟೆಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫಿಸಿನಲ್ಲಿ ನಡೆದ ಲೋಕಲ್‌ಫಂಡ್ ಬೋರ್ಡು ಮಿಟಿಂಗ್ ನಡವಳಿಕೆ.

ಹಾಜರು—

ಮೆಸ್ಸರ್ ಕೆ. ಶ್ರೀನಿವಾಸಯ್ಯಂಗಾರ್ಯರವರು ಡೆಪ್ಯೂಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟರು.

ಅಫಿಷಿಯಲ್.

1 ಮೆಸ್ಸರ್ ಕೆ. ಪ್ರಹ್ಲಾದರಾಯರವರು ಎ॥ ಇಂಜನಿಯರ್
2 ,, ರಾಮಾನುಜಯ್ಯಂಗಾರ್ಯರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್
3. ,, ಶ್ರೀನಿವಾಸಯ್ಯಂಗಾರ್ಯರವರು ಅಸಿಸ್ಟೆಂಟ್ ಸರ್ಜ್ಜ
4. ,, ಶಾಮಯ್ಯಂಗಾರ್ಯರವರು ಹಿರಿಯೂರುಅಮಲ್ದಾರ್
5. ,, ರಾಮಸ್ವಾಮಯ್ಯನವರು ಚಿತ್ರದುರ್ಗಅಮಲ್ದಾರ್
6. ,, ನರಸಿಂಗರಾಯರವರು ಜಗಲೂರು ಅಮಲ್ದಾರ್
7. ,, ಶ್ರೀನಿವಾಸರಾಯರು ಚಿಕ್ಕಜಾಜೂರ ಅಮಲ್ದಾರ್
8. ,, ಕೃಷ್ಣಯ್ಯರವರು ಮೊಳಕಾಲ್ಮುರು ಅಮಲ್ದಾರ್
9. ,, ಶ್ರೀನಿವಾಸಯ್ಯಂಗಾರ್ಯರವರು ದಾವಣಗೆರ ಡಿಟೋ

ನ್ಯಾ ಅಫಿಷಿಯಲ್.

1. ಮೆಸ್ಸರ್ ರಾಮಂಣನವರು ಚಿತ್ರದುರ್ಗ-ತಾ॥ ಮೆಂಬರ್
2. ,, ಸುಬ್ಬಂಣನವರು ಚಿಕ್ಕಜಾಜೂರ ಮೆಂಬರು
3. ,, ಆಕ್ಕತ್ತಪ್ಪನವರು ಜಗಲೂರು ತಾಲ್ಲೂಕು
4. ,, ಕರಿಯಂಣನವರು ಹಿರಿಯೂರು ತಾಲ್ಲೂಕು
5. ,, ಸಿದ್ದರಾಮಯ್ಯನವರು ಹೊಳಲ್‌ಕೆರೆ ತಾಲ್ಲೂಕು

ಗೈರ್ ಹಾಜರು.

1 ಮೆಸ್ಸರ್ ಕೃಷ್ಣರಾಯರವರು ಹೊಳಲ್‌ಕೆರೆ ಅಮಲ್ದಾರ್ (ಕಾಲರಾ ಡ್ಯೂಟಿ ಮೇಲೆ ಇದಾರೆ)

1 ಮೆಸ್ಸರ್ ಗಡಿಗೆ ಸಂಣವೀರಪ್ಪನವರು ಮೊಳಕಾಲ್ಮುರು ಮೆಂಬರು ಈಚಿಗೆ ಮೃತಪಟ್ಟಿದಾರೆ

I 1894ನೇ ಜುಲೈ ಲಾಗಾಯತು ಡಿಸೆಂಬರ್ ಆಖೈರು ವರಿಗಿನ ಜಮಾಖರ್ಚು ಲೆಖ್ಕ ಪ್ರೋದಲಾಯಿತು ಇದರ ಗೋಪ್ಯಾರೆಯನ್ನು ಇದರಡಿ ನಮೂದಿಸಿಧೆ.

409

ಜಮಾ—1894ನೇ ಜುಲೈ ಗುರ್ ಶಿಲ್ಕು		31,412—0—7
ಜಮಾ		5,518—9—0
ಜುಮ್ಲಾ		36,930—9—7
ಖರ್ಚು—(A) ಪಬ್ಲಿಕ್‌ವರ್ಕ್ಸ್ ಇಲಾಖಾ ಮಾರಿಫತ್ತು ನಡಿಯುವ ಕಾಮಗಾರಿಗಾಗಿ		14,911—12—0
(B) ರೆವಿನ್ಯೂ ಇಲಾಖಾ ಮಾರಿಫತ್ತು ನಡಿಯುವ ಕಾಮಗಾರಿಗೆ ..		1,037— 2—2
(C) ಸಿವಿಲ್ ಖುರ್ಚು		3,387—10—5
ಜುಮ್ಲಾ ಖರ್ಚು ..		19,336— 8—7
ಜಾತಾ ಡಿಸೆಂಬರ್ ಆಖ್ಖೇರ್ ಬಾಕಿ		17,594—1—0

ಇದನ್ನ ಪ್ಯಾಸ್ ಮಾಡಬಹುದೆಂತ ತೀರ್ಮಾನಿಸಲಾಯಿತು.

II (1) ಡಿ॥ ಮು॥ III ಕ್ಯಾಸ್ ಭಂಗ್ಲೆಗಳಲ್ಲಿರತಕ್ಕ ಕೊತ್ವಾಲರು ದಂಡಿಗಳನ್ನು ಛಾಲ್ತಿ ಸಾಲ್ ಆಖ್ಖೈರುವರಿಗೆ ನವುಕರಿಮೇಲೆ ಇಟ್ಟುಕೊಳ್ಳಲು ಮಂಜೂರ್ಮಾಡಿರುವದಾಗಿ ಗವರ್ನಮೆಂಟಿನಿಂದ ತಲ್ಪಿದ 15—3—95ನೇ ಮು॥ 12335—6—L. F. 76—94ನೇ ನಂಬರ್ ಪ್ರೊಸೀಡಿಂಗ್ಸ್ ಸಂಗತಿ ತಿಳಿಸಿ ರಿಕಾರ್ಡು ಮಾಡಲಾಯಿತು.

(2) ಹೈ ರೋಡುಗಳಿಂದ ಅಲ್ಲಲ್ಲಿ ಅಡ್ಡರಸ್ತೆಗಳನ್ನು ಹೊಸದಾಗಿ ಮಾಡಿಸುವದ್ದರಿಂದ ಐಂದಾ ಸಾಲಾಬಾದಿಗೆ ತಗಲುವ ಖರ್ಚು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿಗೆ ದುಬಾರೆ ಆಗುವ ಪ್ರಯುಕ್ತ ಇಂಥ ಹೊಸ ರಸ್ತೆಗಳನ್ನು ಮಾಡಿಸಕೂಡದೆಂತಲೂ ಹಾಲಿ ಗ್ರಾಮಗಳ ಮಧ್ಯೆ ಇರತಕ್ಕ ಭಂಡಿ ಜಾಡುಗಳನ್ನ ಅವಶ್ಯಕವಾದ ಕಡೆಯಲ್ಲಿ ದುರಸ್ತು ಮಾಡಿಸಿದರೆ ಸಾಕೆಂತ ಚೀಫ್ ಇಂಜನಿಯರ್ ಸಾಹೆಬರವರಿಂದ ತಲ್ಪಿರುವ 12—3—95ನೇ ಮು॥ 17ನೇ ನರ್‌ಕ್ಯುಲರ್ ಸಂಗತಿ ಓದಿಸಿ ರಿಕಾರ್ಡು ಮಾಡಲಾಯಿತು.

III ಡಿಸ್ಟ್ರಿಕ್ಟು ಮಜಕೂರಲ್ಲಿರತಕ್ಕ ಲೋಕಲ್ ಫಂಡ್ ಮೇಸ್ತ್ರಿಗಳಿಗೆ ಮಾಹೆಯಾನಾ 10 ರೂಪಾಯಿನಂತೆ ಕುದುರೆ ಅಲೋನ್ಸ್ ಕೊಡಿಸುವ ಭಾಗದಲ್ಲಿ ಬೋರ್ಡಿನವರ ತೀರ್ಮಾನವನ್ನು ರಿಪೋರ್ಟು ಮಾಡಬೇಕೆಂತ ತಲ್ಪಿದ 8—2—95ನೇ ಮು॥ 11922—L. F. 379—92ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ವೋದಲಾಯಿತು. ಇವರಿಗೆ 10 ರೂಪಾಯಿನಂತೆ ಅಲೋನ್ಸ್ ಕೊಡತಕ್ಕದ್ದು ಯುಕ್ತವಾಗಿಯೂ ಅತ್ಯವಶ್ಯಕವಾದ್ದಾಗಿಯೂ ಇರುತ್ತಾದ್ದರಿಂದ ಇದರಂತೇನೇ ಅಲೋನ್ಸ್ ಕೊಡಿಸಬೇಕೆಂತ ಗವರ್ನಮೆಂಟಿಗೆ ಶಿಫಾರಸ್ ಮಾಡಬೇಕೆಂತ ತೀರ್ಮಾನಿಸಲಾಯಿತು.

IV ಹರಿಹರದ ರೇಜ್ ಮಲೆಬೆನ್ನೂರಲ್ಲಿರತಕ್ಕ ಹೊನ್ನಪ್ಪನಾಯಿಡರವರ ಛತ್ರವನ್ನು ರಿಪೇರಿ ಮಾಡಲು ಏನು ಖರ್ಚು ತಗಲಬಹುದು ಮತ್ತು ಈ ಕಟ್ಟಡವನ್ನು ಸರ್ಕಾರದ ವಿಚಾರಣೆಗೆ ವಳಪಡಿಸುವ ಭಾಗದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂತ ವಗೈರೆ ಗವರ್ನಮೆಂಟಿನಿಂದ ತಲ್ಪಿದ 20—3—95ನೇ ಮು॥ 15271—L. F. 345—92ನೇ ಪ್ರೊಸೀಡಿಂಗ್ಸ್ ಓದಲಾಯಿತು. ಈ ಕಟ್ಟಡವನ್ನು ಡಿಸ್ಟ್ರಿಕ್ಟು ಫಂಡ್ ಬೋರ್ಡಿನ ಆಡಳಿತಕ್ಕೆ ತಗದುಕೊಳ್ಳತಕ್ಕದ್ದೆಂತಲೂ, ಇದರ ರಿಪೇರಿಗಾಗಿ ತಯಾರಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಅಭಿಪ್ರಾಯಕ್ಕಾಗಿ ಕಳುಹಿಸತಕ್ಕ ಅಂದಾಜಾವನ್ನ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ವಾಪಸ್ ತರಿಸಿಕೊಂಡು ಮಂಜೂರಿ ಬ್ಯೆ ಗವರ್ನಮೆಂಟಿಗೆ ಕಳುಹಿಸಿಕೊಡತಕ್ಕದ್ದೆಂತಲೂ, ತೀರ್ಮಾನಿಸಲಾಯಿತು.

V ಮೊಳಕಾಲ್ಮುರು ತಾಲ್ಲೂಕು ಲೋಕಲ್ ಫಂಡ್ ಮೆಂಬರು ಮೆಸ್ಸರ್ ಗಡಿಗೆ ಸಂಣವೀರಪ್ಪನವರು ವೃತಪಟ್ಟದ್ದಾಗಿ ಆ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 20—3—95ನೇ ಮು॥ 214ನೇ ನಂಬರ್ ರಿಪೋರ್ಟು ಓದಲಾಯಿತು. ಈ ವಿಷಯದಲ್ಲಿ ಬೋರ್ಡಿನವರು ವಿಷಾದಿಸುತ್ತಾರೆ.

VI ಬೋರ್ಡು ಮೆಂಬರುಗಳ ಸ್ಥಾನದಲ್ಲಿ 2 ಹಾಲಿ ಖಾಲಿ ಇರುವದ್ದರಿಂದ ಹರಿಹರದ ಬಸಪ್ಪನವರನ್ನ ದಾವಣಗೆರೆ ತಾಲ್ಲೂಕು ಮೆಂಬರಾಗಿ ನೇಮಿಸಬಹುದಾಗಿ ಶಿಫಾರಸ್ ಮಾಡಿ ಗವರ್ನಮೆಂಟಿಗೆ ಬರಿಯತಕ್ಕೆಂತಲೂ ಒರುವ ಏಪ್ರಿಲ್ ಆಖ್ಖೈರೊಳಗಾಗಿ ಒಬ್ಬ ಇನಾಂದಾರ್ ಮೆಂಬರನ್ನ ಚುನಾಯಿಸತಕ್ಕ ಬ್ಯೆ ಡಿಸ್ಟ್ರಿಕ್ಟು ಮಜಕೂರಿನಲ್ಲಿರತಕ್ಕ ಇನಾಂದಾರುಗಳಿಗೆ ಅಥವಾ ಅವರ ವಿಜಂಟುಗಳಿಗೆ ನೋಟಿಸ್ ಕೊಡಿಸಬೇಕೆಂತಲೂ ತೀರ್ಮಾನಿಸಲಾಯಿತು.

ಸಿ. ಶ್ರೀನಿವಾಸಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟರು.

ಸ್ವಂತ ಪ್ರಕಟನೆ.

ಶ್ರೀನಿವಾಸಪುರ ದ್ರವ್ಯಸಹಾಯ ಕಂಪನಿ ಆಫಿಷಿಯಲ್ ಲಿಕ್ವಿಡೇಟರವರ ಆಫಿಸಿನಿಂದ—ಈ ಕಂಪನಿ ಮೆಂಬರುಗಳಿಗೆ ತಿಳಿಯಪಡಿಸುವದೇನಂದರೆ—ಈ ಕಂಪನಿ ಬಾಬತು ಮೊಬಲಗು ದಾವಾಷ್ಠಾಯಿಯಲ್ಲಿ ಮೆಂಬರುಗಳು ಕೊಟ್ಟು ಇರುವ ಜೋನೇಷ್ಟ ಮತ್ತು ಕಾಲ್ಸು ಮೊಬಲಗಿಗೆ ಸಹ ರೂಪಾಯಿ 1ಕ್ಕೆ ರೂ. 0 ಆ. 5 ಪೈ. $8\frac{1}{3}$ ಪ್ರಕಾರ ಚಿಂತಾಮಣಿಯಲ್ಲಿ ಬಟವಾಡೆ ಮಾಡಲ್ಪಡುತ್ತೆ. ಮೆಂಬರುಗಳು ಖುದ್ದಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದವರ ಮೂಲಕವಾಗಲಿ ಹಾಜರಾಗಿ ತಾವು ಹೊಂದಿರುವ ಸರಟಿಫಿಕೇಟ್ ರಸೀತಿಗಳೂ ಸಹ ತಂದು ವಾಪಸ್‌ಕೊಟ್ಟು ಮೊಬಲಗು ತೆಗದುಕೊಳ್ಳಬಹುದು.

ಫರ್ಸ್ಟ್‌ಗ್ರೇಡ್ ಪ್ಲೀಡರ್,
ಬಿ. ಶೀತಾರಾಮಪ್ಪ.